**4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

**ಎಸ್. ಸಿ. ನಂ. 27/2022**

**ಪಿ ಡಬ್ಲ್ಯೂ: 10**

**ಸಿ ಡಬ್ಲ್ಯೂ: 9**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಕೀಲ ಬದಾಮಿ |
| ತಂದೆಯ ಹೆಸರು | : | ಮಹಮ್ಮದಯೂಸೂಫ |
| ವಯಸ್ಸು | : | 40 ವರ್ಷಗಳು |
| ಉದ್ಯೋಗ | : | ಡ್ರೈವರ |
| ವಾಸಸ್ಥಳ | : | ಕೆಸಿಸಿ ರಸೂಲಪೂರ ಓಣಿ ಧಾರವಾಡ |

ದಿನಾಂಕಃ 21-07-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಧಾರವಾಡ ಶಹರ ಪೋಲಿಸ ಠಾಣೆಯಲ್ಲಿ ನನಗೆ ಸಹಿ ಮಾಡಲು ಕರೆದಿದ್ದರು ನಾನು ಸಹಿ ಮಾಡಿ ಹೋಗಿದ್ದೇನೆ. ಯಾವ ವಿಷಯಕ್ಕೆ ಮತ್ತು ಯಾವ ಕೇಸಿಗೆ ಎಂದು ನನಗೆ ಗೊತ್ತಿಲ್ಲ . ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಪಡೆದುಕೊಂಡಿಲ್ಲ . ಈ ದಿನ ನ್ಯಾಯಾಲಯದ ಪರದೆ ಮೇಲೆ ವಿ ಸಿ ಮುಖಾಂತರ ಸೆಂಟ್ರಲ್ ಜೈಲಿನಿಂದ ತೋರಿಸಿದ ಆರೋಪಿ ಆ ದಿನ ಠಾಣೆಯಲ್ಲಿ ಇದ್ದನು ಆದರೆ ಆತನು ಏನು ಹಾಜರುಪಡಿಸಿದ್ದಾನೆ ಎಂದು ನನಗೆ ಗೊತ್ತಿಲ್ಲ. ನನ್ನ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ . ಈಗ ನನಗೆ ತೋರಿಸಿದ ಪಂಚನಾಮೆಯಲ್ಲಿರುವ ಸಹಿ ನನ್ನದು . ಸಾಕ್ಷಿಯ ಸಹಿಂನ್ನು ಗುರುತಿಸಿದ

ಕಾರಣ ಬಟ್ಟೆ ಜಪ್ತು ಪಂಚನಾಮೆಯನ್ನು ಈಗಾಗಲೇ ನಿ ಪಿ –11 ಎಂದು ಸಾಕ್ಷಿಯ ಸಹಿಯನ್ನು ನಿಪಿ –11 (ಬಿ ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಪೋಟೋದಲ್ಲಿ ನಾನು , ರಫೀಕ ಮತ್ತು ಪೊಲೀಸರು ಮತ್ತು ಇನ್ನೊಬ್ಬ ವ್ಯಕ್ತಿ ಇರುತ್ತಾರೆ. ಆತ ಯಾರು ಎಂದು ಗೊತ್ತಿಲ್ಲ . ಪೊಟೊ ಯಾಕೆ ತೆಗೆದಿದ್ದಾದರೆ ಎಂದು ಗೊತ್ತಿಲ್ಲ . ಸದರಿ ಪೊಟೊವನ್ನು ಈಗಾಗಲೇ ನಿಪಿ – 12 ಮತ್ತು 13 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ, ಅನುಮತಿ ನೀಡಲಾಯಿತು.)

**ಪಾಟೀ ಸವಾಲು: ಸರ್ಕಾರಿ ಅಭಿಯೋಜಕರಿಂದ:**

ದಿನಾಂಕ 23–02–2022 ರಂದು ಬೆಳಗ್ಗ 9.00 ಗಂಟೆಗೆ ನನ್ನನ್ನು ಮತ್ತು ಶಕೀಲನನ್ನು ಧಾರವಾಡ ಶಹರ ಪಂಚನಾಮೆ ಪಂಚನಾಮೆ ರನ್ನಾಗಿ ಕರೆಯಿಸಿದ್ದು ಆರೋಪಿ ಶಿವಶಂಕರ ಗರಗ ಇತನು ಕೃತ್ಯ ಸಮಯದಲ್ಲಿ ಧರಿಸಿದ್ದ ಬಟ್ಗೆಗಳನ್ನು ಠಾಣೆಯಲ್ಲಿ ನಮ್ಮ ಸಮಕ್ಷಮ ಹಾಜರುಪಡಿಸಿದ್ದು ಒಂದು ನೀಲಿ ಕಲರಿನ ಜಿನ್ಸ ಪ್ಯಾಂಟ ಮತ್ತು ಒಂದು ಕಪ್ಪು ಕಲರಿನ ಅರ್ಧ ತೋಳಿನ ಟಿ ಶರ್ಟ ಮತ್ತು ತಿಳಿ ನೀಲಿ ಕಲರಿನ ಪೂರ್ತಿ ಕೈಯ ಟಿ ಶರ್ಟನ್ನು ಹಾಜರುಪಡಿಸಿದ್ದು ಪೇಪರನಲ್ಲಿ ಸೀಲು ಮಾಡಿ ಪ್ಯಾಕ ಮಾಡಿ ನಮ್ಮ ಸಮಕ್ಷಮ ಜಪ್ತು ಪಡಿಸಿಕೊಂಡು ನಿಪಿ –11 ರ ಪ್ರಕಾರ ಪಂಚನಾಮೆ ಮಾಡಿ ನನಗೆ ಓದಿ ಹೇಳಿದ್ದಾರೆ ಎ್ಹಂದರೆ ಸರಿಯಲ್ಲ . ನಿಪಿ –12 ಮತ್ತು 13 ರ ಪ್ರಕಾರ ಸ್ಥಳದಲ್ಲಿಲ ಪೊಟೋ ತೆಗೆದು ಪ್ಯಾಕ ಮಾಡಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎಂ ಕೆ ವಕೀಲರಿಂದ:</u>**

ಆರೋಪಿ ಪರ ವಕೀಲರಾದ ಎಂ ಎಂ ಕೆ ಹಲವಾರು ಬಾರಿ ಕರೆಯಿಸಲಾಯಿತು . ಗೈರು ಹಾಜರಾಗಿರುತ್ತಾರೆ . ಪಾಟೀ ಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು .

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.